ಕ. ಸ.ಎಂ.

ಕರ್ನಾಟಕ ನ್ಯಾಯಾಲಯಗಳ ಶುಲ್ಕ ಮತ್ತು ದಾವಾಗಳ ಬೆಲೆ (ತಿದ್ದುಪಡಿ) ವಿಧೇಯಕ 1983.

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯವರು). —"ಕರ್ನಾಟಕ ರಾಜ್ಯದ ನ್ಯಾಯಾಲಯಗಳ ಶುಲ್ಕ ಮತ್ತು ದಾವಾಗಳ ಬೆಲೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಸೂಚಿಸಲಾಯಿತು

ಶ್ರೀ ಎಂ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ವಿಚಾರ ಇದೆ, ಕೋರ್ಟು ಫೀ ಮತ್ತು ಸ್ಟ್ಯಾಂಪುಗಳನ್ನು ಹಾಕತಕ್ಕಂಥ ಸಮಯದಲ್ಲಿ ಕೆಲವು ಸಲ ರೀಫಂಡ್ ಕೇಳುತ್ತಾರೆ. ಸ್ಟ್ಯಾಂಪುಗಳನ್ನು ಕೋರ್ಟಿನವರು ಪಂಚ್ ಮಾಡುತ್ತಾರೆ; ಯಾವುದೇ ಕಾರಣಕ್ಕೂ ಸ್ಟ್ಯಾಂಪುಗಳು ಉಪಯೋಗಕ್ಕೆ ಬರುವುದಿಲ್ಲ. ಈಗಿನ ಪದ್ಧತಿ ಪ್ರಕಾರ ಪಾರುಪಾವತಿ ತೆಗೆದುಕೊಳ್ಳಬೇಕಾಗಿದ್ದರೆ, ಅಸಿಸ್ಟೆಂಟ್ ಕಮೀಷನರ್ ಅಥವಾ ತಹಶೀಲ್ದಾರ್‌ರವರಿಗೆ ಮನವಿ ಮಾಡಿ ರೀಫಂಡ್ ಚೆಕ್ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಹಿಂದೆ ಇದ್ದಂಥ ಪದ್ಧತಿ ಪ್ರಕಾರವಾಗಿ ಕೋರ್ಟಿನವರು ರೀಫಂಡ್ ಚೆಕ್ ಕೊಡುತ್ತಿದ್ದರು. ಇದನ್ನು ಸರಳಗೊಳಿಸಿ ತಿದ್ದುಪಡಿ ತರಲಾಗಿದೆ. ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಈ ಸಭೆ ಇದಕ್ಕೆ ಅನುಮೋದನೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರಸ್ತಾವನೆಯ ಪರ್ಯಾಲೋಚನೆ

Motion for Consideration

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ—ಕರ್ನಾಟಕ ರಾಜ್ಯ ನ್ಯಾಯಾಲಯಗಳ ಶುಲ್ಕ ಮತ್ತು ದಾವಾಗಳ ಬೆಲೆ (ತಿದ್ದುಪಡಿ ವಿಧೇಯಕ) ೧೯೮೩ನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕೃತವಾಯಿತು

ಖಂಡಗಳ ಪರಿಶೀಲನೆ

ಖಂಡ ೨ ಮತ್ತು ೩

ಉಪಾಧ್ಯಕ್ಷರು.—ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆಯೆಂದರೆ.—"ಖಂಡ ೨ ಮತ್ತು ೩. ಎರಡನೇ ಮತ್ತು ಮೂರನೇ ಖಂಡ ಹಾಗೂ ಅನುಸೂಚಿ ವಿಧೇಯಕ ಅಂಗಗಳಾಗಿವೆ".

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

(ಎರಡನೇ ಮತ್ತು ಮೂರನೇ ಖಂಡ ಹಾಗೂ ಅನುಸೂಚಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದಲನೆಯ ಖಂಡ ಇತ್ಯಾದಿ

ಉಪಾಧ್ಯಕ್ಷರು.—ಪ್ರಸ್ತಾವನೆಯೆಂದರೆ—"ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗಗಳಾಗಿವೆ"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿದೆ)

ಅನುಮೋದನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ರಾಜ್ಯ ನ್ಯಾಯಾಲಯಗಳ ಶುಲ್ಕ ಮತ್ತು ದಾವಾಗಳ ಬೆಲೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅನುಮೋದಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವನೆಯೆಂದರೆ—''ಕರ್ನಾಟಕ ರಾಜ್ಯ ನ್ಯಾಯಾಲಯಗಳ ಶುಲ್ಕ ಮತ್ತು ದಾವಾಗಳ ಬೆಲೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅನುಮೋದಿಸುವುದು''

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ಕರ್ನಾಟಕ ಅಭಿವೃದ್ಧಿ ಮಂಡಲಿಯ (ತಿದ್ದುಪಡಿ) ವಿಧೇಯಕ 1983 ಪರ್ಯಾಲೋಚನೆ ಪ್ರಸ್ತಾವ

ಶ್ರೀ ಎಂ. ಚಂದ್ರಶೇಖರ್.—''೧೯೮೩ನೇ ಕರ್ನಾಟಕ ಅಭಿವೃದ್ಧಿ ಮಂಡಲಿಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ''

ಪ್ರಸ್ತಾವವನ್ನು ಸೂಚಿಸಲಾಯಿತು

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ವಿಷಯಗಳಿವೆ. ಮೊದಲನೆಯದು ನಗರಾಭಿವೃದ್ಧಿ ಮಂಡಲಿಗಳ ಅಧ್ಯಕ್ಷರ ಮತ್ತು ಮಂಡಲಿಯ ಆರ್ಥಿಕ ಅಧಿಕಾರ ಹೆಚ್ಚು ಮಾಡುವುದು. ಇದುವರೆಗೆ ೧೦ ಸಾವಿರದಿಂದ ೨೫,೦೦೦ ವರೆಗೆ ಏನಿತ್ತು, ಅದನ್ನು ೫೦,೦೦೦ ದಿಂದ ಎರಡು ಲಕ್ಷಕ್ಕೆ ಹೆಚ್ಚಿಸಿ ಅನುಕೂಲ ಮಾಡಿಕೊಡುವುದು. ಇನ್ನು ಎರಡನೆಯದು ಬಡಾವಣೆಗಳನ್ನು ಮಾಡುವ ಸಲುವಾಗಿ ಯಾವುದೇ ಜಮೀನುಗಳನ್ನು ಸ್ವಾಧೀನ ಮಾಡಿಕೊಳ್ಳಬೇಕಾದರೂ ಪ್ರತಿಯೊಂದು ಕೂಡ ಸರ್ಕಾರಕ್ಕೆ ಬರಬೇಕಾಗಿತ್ತು. ಈ ಕಾನೂನು ಪ್ರಕಾರ ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳಿಗೆ ಕ್ರಮವಾಗಿ ೫ ಮತ್ತು ೧೦ ಹೆಕ್ಟೇರ್ ಭೂಮಿಯನ್ನು ಕೊಂಡುಕೊಳ್ಳುವಂಥ ಅಧಿಕಾರ ಕೊಡಲಾಗಿದೆ. ವಿಕೇಂದ್ರೀಕರಣದಿಂದ ಕೆಲಸ ಕೂಡ ಸುಲಲಿತವಾಗಿ ನಡೆಯುವುದಕ್ಕೆ ಅವಕಾಶ ವಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಈ ಮಂಸೂದೆಯ ಮೂಲಕ ಬೋರ್ಡಿನ ಅಧ್ಯಕ್ಷರಿಗೆ ಮತ್ತು ಬೋರ್ಡಿಗೆ ಹೆಚ್ಚಿನ ಹಣಕಾಸಿನ ಅಧಿಕಾರವನ್ನು ಕೊಡುವುದಕ್ಕೆ ಹೊರಟಿದ್ದಾರೆ. ಏತಕ್ಕೋಸ್ಕರ ಕೊಡಬೇಕೆನ್ನುವುದನ್ನು ಹೇಳಲಿಲ್ಲ. ೧೦,೦೦೦ ಇದ್ದುದು ೫೦,೦೦೦ ವಿತಕ್ಕೆ ಕೊಡ ಬೇಕು ? ೫೦,೦೦೦ ಇದ್ದುದು ೨ಲಕ್ಷ ವಿತಕ್ಕೆ ಕೊಡಬೇಕು ? ಈಗ ಇರತಕ್ಕ ನಿಯಮದ ಪ್ರಕಾರ ೧೦,೦೦೦ ಹಾಗೂ ೨೦,೦೦೦ಬೆಲೆಯ ಕೆಲಸಗಳನ್ನು ಹರಿಜನರು, ಹಿಂದುಳಿದ ವರ್ಗದವರು ಹಾಗೂ ಹರಿ ಜನರ ಸೊಸೈಟಿಗಳು ಇದ್ದರೆ ಅವರಿಗೆ ಕೊಡಬೇಕೆಂದು ಇದೆ. ಈ ರೀತಿ ವಿಸ್ತರಣೆ ಮಾಡುವುದರಿಂದ, ಆ ಒಂದು ವರ್ಗಕ್ಕೆ ಸಾಮಾಜಿಕ ನ್ಯಾಯ ದೊರಕಿಸಿದಂತಾಗುವುದಿಲ್ಲ. ಲಿಮಿಟೇಷನ್ ಕೂಡ ವಿರಿಸುವುದಾದರೆ ನಮ್ಮ ಅಭ್ಯಂತರ ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಆಶ್ವಾಸನೆ ಕೊಡುತ್ತಾರೆಯೇ ? ಈಗ ತಂದಿರುವ ಕಾನೂನು ಪ್ರಕಾರ ಹರಿಜನರ ಸೊಸೈಟಿಗಳಿಗೂ ಕೊಡುತ್ತೇವೆಂದರೆ ನಮ್ಮ ಆಕ್ಷೇಪಣೆಯಿಲ್ಲ. ಎರಡನೆಯದು ೫ ಹೆಕ್ಟೇರ್ಸ್ ಅಂದರೆ ಸುಮಾರು ೧೨ ಎಕರೆ ಜಮೀನನ್ನು ಅಗ್ರಿಮೆಂಟ್ ಮೂಲಕ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ ; ಇದರಿಂದ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಹಾಲಿ ಇರತಕ್ಕ ಕಾನೂನಿನಲ್ಲಿ ಎಮರ್ಜೆನ್ಸಿ ಆಕ್ವಿಜಿಷನ್ ಮಾಡುವುದಕ್ಕೆ ಅವ ಕಾಶ ಇದ್ದರೂ ಕೂಡ ಸೇಲ್ ಅಗ್ರಿಮೆಂಟ್ ವಿತಕ್ಕೆ ತಂದಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಾನು ಮಾಜಿ ಕಾನೂನು ಮಂತ್ರಿಯವರಿಗೆ ವಿನಯದಿಂದ ಹೇಳುತ್ತೇನೆ. ಹಾಲಿ ಇರುವ ಕಾನೂನಿನಲ್ಲಿ ಅವಕಾಶವಿದೆ, ಇಲ್ಲವೆಂದು ಹೇಳುತ್ತಿಲ್ಲ. ಪ್ರತಿಯೊಂದು ಸಮಯದಲ್ಲಿಯೂ ಅರ್ಧ ಸೆಂಟ್ ಭೂಮಿಯನ್ನು ಕೊಂಡುಕೊಳ್ಳಬೇಕಾದರೂ ಆಕ್ವಿಜಿಷನ್ ಪ್ರೊಸೀ ಡಿಂಗ್ಸ್‌ಗೆ ಹೋಗಬೇಕಾಗುತ್ತದೆ. ಬೆಲೆ ನ್ಯಾಯವಾಗಿದ್ದರೆ ಇದರಲ್ಲಿ ನೇರವಾಗಿ ಕೊಂಡುಕೊಳ್ಳುವು ದಕ್ಕೆ ಅವಕಾಶ ಮಾಡಿದೆ. ಪ್ರತಿಯೊಂದು ಪ್ರಮಾಣದ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ಅವ ಕಾಶ ಇದೆ. Sir, now for any quantity of land that may be purchased